ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ    ದಿನಾಂಕ : DATE : 17/03/2020

# ಸಾರ್ವಜನಿಕರಿಗೆ ವಿಧಾನಸಭೆ ಪ್ರವೇಶ ನಿಷೇಧ

ವಿಧಾನಸಭೆ: ಕೊರೊನಾ ಹಿನ್ನೆಲೆಯಲ್ಲಿ ಮಾರ್ಚ್ 17ರಿಂದ ಸಾರ್ವಜನಿಕರಿಗೆ ವಿಧಾನಸಭಾ ಪ್ರವೇಶ ನಿಷೇಧಿಸಲಾಗಿದೆ. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸೋಮವಾರ ಈ ವಿಷಯವನ್ನು ಸದನದಲ್ಲಿ ಪ್ರಕಟಿಸಿದರು.

'ಕೊರೊನಾ ಹಿನ್ನೆಲೆಯಲ್ಲಿ ವಿಧಾನಸಭಾ ಸಾರ್ವಜನಿಕರು ಮತ್ತು ಸಭಾಧ್ಯಕ್ಷರ ಗ್ಯಾಲರಿಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ. ಆದ್ದರಿಂದ ಸಾರ್ವಜನಿಕರಿಗೆ ಕಲಾಪ ವೀಕ್ಷಿಸುವ ಪಾಸ್ ನೀಡುವಂತೆ ಯಾವುದೇ ಶಾಸಕರು ಅಧಿಕಾರಿಗಳಿಗೆ ಶಿಫಾರಸು ಮಾಡಬಾರದು' ಎಂದು ಕಾಗೇರಿ ಸೂಚಿಸಿದರು.

# ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ತರಾಟೆ

ವಿಧಾನಸಭೆ: ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಭೂ ಹಕ್ಕು ಕಾಯ್ದೆ ಸಂಪೂರ್ಣ ನಿಷ್ಪ್ರಯೋಜಕವಾಗಿದೆ. ಅರಣ್ಯ ಅಧಿಕಾರಿಗಳು ಮತ್ತು ಸಮಾಜ ಕಲ್ಯಾಣ



ಇಲಾಖೆಯ ಅಧಿಕಾರಿಗಳಿಗೆ ಬಡ ಸಾಗುವಳಿದಾರರ ಬಗ್ಗೆ ಕಾಳಜಿಯೇ ಇಲ್ಲದಾಗಿದೆ ಎಂದು ಅರಗ ಜ್ಞಾನೇಂದ್ರ ಸೋಮವಾರ ಸದನದಲ್ಲಿ ಬಲವಾಗಿ ತರಾಟೆಗೆ ತೆಗೆದುಕೊಂಡರು.

ಎಷ್ಟೋ ವರ್ಷಗಳಿಂದ ಅರಣ್ಯ ಪ್ರದೇಶದಲ್ಲಿ ಸಾಗುವಳಿ ಮಾಡಿಕೊಂಡಿದ್ದವರಿಗೆ ಹಕ್ಕುಪತ್ರಗಳನ್ನು ಕೊಡುವುದಕ್ಕೆ ಸಂಬಂಧಿಸಿದ ಸಭೆಗಳೇ ನಡೆಯುತ್ತಿಲ್ಲ ಎಂದು ಅವರು ದೂರಿದರು. ಜ್ಞಾನೇಂದ್ರ ಮಾತಿಗೆ ಸದನದ ಬಹುತೇಕ ಸದಸ್ಯರು ಸಹಮತ ವ್ಯಕ್ತಪಡಿಸಿದರು. ಅರಣ್ಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಸಭೆ ಇನ್ನು ಮುಂದೆ ನಿಯಮಿತವಾಗಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಸಚಿವರೂ ಆದ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ತಿಳಿಸಿದರು.

# ಕೃಷಿ ಸಚಿವರ ಮೊದಲ ಮಾತು

ವಿಧಾನಸಭೆ: ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರಿಗೆ (ಉಪ ಚುನಾವಣೆ ಗೆದ್ದು ಸಚಿವರಾದ ನಂತರ) ಮೊದಲ ಪ್ರಶ್ನೆ ಸೋಮವಾರ ಎದುರಾಯಿತು.



ತುರುವೇಕೆರೆಯ ಮಸಾಲೆ ಜಯರಾಂ ತೆಂಗು ಬೆಳೆಗೆ ಬಂದಿರುವ 'ದಿಗ್ಬಂಧನ ಕೊಳೆ' ಕುರಿತು ಕೈಗೊಂಡಿರುವ ಕ್ರಮದ ಕುರಿತು ಸಚಿವರಿಗೆ ಪ್ರಶ್ನೆ ಕೇಳಿದರು.

ತಾವು ಸದನದಲ್ಲಿ ಮೊದಲ ಪ್ರಶ್ನೆ ಎದುರಿಸಿ, ಉತ್ತರ ನೀಡುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿಯೇ ಬಿ.ಸಿ.ಪಾಟೀಲ್ ತಮ್ಮ ಉತ್ತರ ನೀಡಿದರು. ದಿಗ್ಬಂಧನ ಕಳೆಯನ್ನು ನಿವಾರಿಸಲು ಕೃಷಿ ವಿಶ್ವವಿದ್ಯಾಲಯಕ್ಕೆ 19.79 ಲಕ್ಷ ರೂಪಾಯಿಗಳನ್ನು ನೀಡಲಾಗಿದೆ. ಈ ಕಳೆಯಿಂದ ತೆಂಗು ವ್ಯಾಪಕವಾಗಿ ಹಾಳಾಗುತ್ತಿರುವುದು ಗಮನಕ್ಕೆ ಬಂದಿದ್ದು, ಅದನ್ನು ನಿಯಂತ್ರಿಸುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನೆಲ್ಲ [illegible]